ನೆಂಟಸ್ತಿಕೆ ಬಂದಾಗ, ಒಪ್ಪಿಗೆ ಕೊಡುವ ಮೊದಲು ಅಜ್ಜಿ ಶಾಂತಿ ಅತ್ತೆಗೆ ಮೊದಲು ಕೇಳಿದ್ದು. ಇಲ್ಲ, ನೀವು ಮದುವೆ ಮಾಡಿ ಅವ ಈಗಷ್ಟೇ ಆರ್ಮಿಗೆ ಹೋದದ್ದು, ಬೇಗ ಅಲ್ಲಿಂದ ಬಿಟ್ಟು ಬಂದು ಇಲ್ಲಿ ಕೃಷಿ ಮಾಡ್ತಾನೆ ಅಂತೆ. ಹೇಗೂ ನಾನೂ ನಿನ್ನ ಹಾಗೆ ಒಂಟಿ ಜೀವ. ನನ್ನ ಜೊತೆ ಯಾರಾದರೂ ಒಂದು ಜೀವ ಬೇಕಲ್ಲ. ನೀವು ಮದುವೆ ಮಾಡಿ ಅಂತ ಒಪ್ಪಿಗೆ ಕೊಟ್ಟಿದ್ದರು. ಮನಸು ಬದಲಾಯಿಸಿದ್ದಾರೆ ಏನೋ, ಸಾಬು ಮಿಲಿಟರಿಯಲ್ಲಿ ಇರುವ ಕಾರಣ ಯಾರಾದರೂ ನರ್ಸ್ ಹುಡುಗಿಯನ್ನು ಮದುವೆ ಆಗುತ್ತಾನೆ ಏನೋ, ಋಣಾನುಬಂಧ ಕೂಡಿ ಬರದೇ ಇದ್ದ ಮೇಲೆ ಏನು ಮಾಡುವುದು ಅಂತ ಅಜ್ಜಿ ತೆಪ್ಪಗಾದರು. ಆದರೆ ಅವರಿಗೆ ಮಣಿ ಚಿಕ್ಕಿಯ ಮೇಲೆ ಮನಸಿದೆ ಅಂತ ಗೊತ್ತಿದ್ದರೆ ಇಷ್ಟೆಲ್ಲ ಆಗುತ್ತಿರಲಿಲ್ಲ. ಮಣಿಯ ಇಷ್ಟಾನಿಷ್ಟದ ಪ್ರಶ್ನೆ ಬಿಟ್ಟು ಮದುವೆಯಂತೂ ಮಾಡಿಕೊಡುತ್ತಿದ್ದರು. ಇನ್ನು ಮೊದಲಿಗೆ ಬಂದ ಸಂಬಂಧ ಒಳ್ಳೆಯದೇ. ನಿನ್ನಪ್ಪ ಪೊಲೀಸ್ ಕಾನ್‌ಸ್ಟೇಬಲ್. ಒಂದೇ ಊರು ಬೇರೆ. ಅಜ್ಜಿಗೆ ಸ್ವಲ್ಪ ಖುಷಿಯೆ ಆಯ್ತು. ಇನ್ನಾದರೂ ನೆರೆಕರೆ ತಂಟೆ ತಕಾರಾರು ಇಲ್ಲದೆ ಸ್ವಲ್ಪ ಬಿಗಿಯಾಗಿ ಇರುತ್ತಾರೆ ಅಂತ.

ಯಾವಾಗ ಮಣಿ ಚಿಕ್ಕಿಗೆ ಸಂಬಂಧ ಬಂದು ಒಪ್ಪಿಗೆ ಕೊಟ್ಟರೋ, ಅಲ್ಲಿಂದ ಇದೆಲ್ಲ ಶುರುವಾದದ್ದು. ನೆರೆಕರೆ ಯಾವಾಗಲೂ ಹೊಡೆದಾಟ ಬಡಿದಾಟ ನೋಡಿಯೇ ರೋಸಿ ಹೋಗಿ ಮಣಿಗೆ ಎಲ್ಲಾದರೂ ದೂರ ಮದುವೆಯಾಗಿ ಹೋಗಿ ಬಿಡಬೇಕು ಅನ್ನಿಸದೇ ಇರಲಿಲ್ಲ. ನನ್ನೊಂದಿಗೆ ಅದೆಷ್ಟೋ ಬಾರಿ ಹೇಳಿಕೊಂಡಿದ್ದಳು. ಹೇಗೋ ನಿನಗೆ ಪೊಲೀಸು ಗಂಡ ಸಿಕ್ಕಿದ್ದಾರೆ. ನನಗೆ ಕೆಲಸದಲ್ಲಿ ಇರುವ ಹುಡುಗ ಬರುತ್ತಾನೋ ಇಲ್ಲವೋ... ಯಾರ ಸಂಬಂಧ ಮೊದಲು ಬರುತ್ತದೋ... ಸರಿಗಟ್ಟು ಆದರೆ ಆಚೆಈಚೆ ನೋಡದೆ ಅಮ್ಮ ಮದುವೆ ಮಾಡಿಯೇ ಬಿಡುತ್ತಾಳೆ. ಆಗಲೇ ನೋಡು, ಈ ಕನ್ನಡ ಜಿಲ್ಲೆಯ ಕಡೆಯಿಂದ ಸಂಬಂಧ ಬಂದದ್ದು. ಹುಡುಗನನ್ನು ನೋಡಿದ್ದಾಳೋ ಬಿಟ್ಟಿದ್ದಾಳೋ ಕಣ್ಣುಮುಚ್ಚಿ ಒಪ್ಪಿಗೆ ಕೊಟ್ಟೇ ಬಿಟ್ಟಳು. ಹೆಚ್ಚು ಕಡಿಮೆ ಇಬ್ಬರಿಗೂ ಹದಿನಾಲ್ಕು ವರುಷ ವ್ಯತ್ಯಾಸ ಕೂಡ ಅವಳ ಮೇಲೆ ಯಾವ ಪರಿಣಾಮವೂ ಬೀರಲಿಲ್ಲ. ಮಣಿಗೆ, ಸಾಬು ಅವಳನ್ನು ಇಷ್ಟಪಡುವ ಸಣ್ಣ ಸುಳಿವು ಇತ್ತೆಂದು ಕಾಣುತ್ತದೆ. ಹಾಗಂತ ಅವನೇನೂ ಇವಳ ಜೊತೆ ಬಾಯಿ ಬಿಟ್ಟು ಹೇಳಿಕೊಂಡಿರಲಿಲ್ಲ. ಒಂದು ಕಣ್ಣು ನೋಟ, ಹಾವಭಾವ, ಇವಿಷ್ಟೇ ಸಾಕು ತಾನೇ ಮನುಷ್ಯನ ಆಳದ ಪ್ರೀತಿಯ ಭಾವನೆಯನ್ನು ಅರ್ಥೈಸಿಕೊಳ್ಳಲು. ಮಣಿಗೆ ಸಾಬುವನ್ನು ಕಂಡರೆ ಆಗುತ್ತಿರಲಿಲ್ಲವೆಂದು ತೋರುತ್ತದೆ. ಸಾಬುವನ್ನು ನಿರಾಕರಿಸುವ ಹಾಗೇ ಇರಲಿಲ್ಲ. ಬೆಳ್ಳನೆಯ, ತಿರುವು ಮೀಸೆಯ, ಚೆಂದದ ಯುವಕನೇ. ಜೊತೆಗೆ ಮಿಲಿಟರಿಯಲ್ಲಿ ಬೇರೆ ಇದ್ದಾನೆ. ಇಷ್ಟಿದ್ದೂ ಕೆಲವೊಮ್ಮೆ ನಿರಾಕರಣೆಗೆ ಸೂಕ್ತ ಕಾರಣಗಳೇ ಇರುವುದಿಲ್ಲ. ಆದರೂ ಕೆಲವೊಂದು ಸಕಾರಣಗಳನ್ನು ಯೋಚಿಸುತ್ತಾ ಮನಸು ನಿರಾಕರಣೆಗೆ ತೊಡಗುತ್ತದೆ. ಮೊದಲೇ ಸೋದರ ಸಂಬಂಧಿ. ಹತ್ತಿರದ ನೆಂಟಸ್ತಿಕೆ ಮಾಡಿದರೆ ಸಸಾರವೇ ಹೆಚ್ಚು. ಜೊತೆಗೆ ಅಲ್ಲಿಗೆ ಮದುವೆ ಆಗಿಹೋದರೆ ತೋಟ, ಗದ್ದೆ, ಮನೆ ಎಲ್ಲ ಕೆಲಸ ಇವಳ ಮೇಲೆ ಬೀಳುತ್ತದೆ ಅಂತ ಗೊತ್ತಿತ್ತು. ಅದಲ್ಲದೆ ಸಾಬು ಮಿಲಿಟರಿಯಲ್ಲಿರುವವ. ಬೇಗ ಊರಿಗೆ ಬರುತ್ತೇನೆ ಅಂತ ಆವತ್ತಿನಿಂದ ಹೇಳುತ್ತಲೇ ಇದ್ದಾನೆ. ಬರುವ ಸೂಚನೆ ಇಲ್ಲ. ಮದುವೆ ಆಗಿಹೋದರೆ ಹೆಂಡತಿಯನ್ನು ಕರೆದುಕೊಂಡು ಹೋಗಲಾರ ಅನ್ನುವುದೂ ಗೊತ್ತಿದೆ. ಅವಳು ಅತ್ತೆಯ ಜೊತೆ ಒಂಟಿಯಾಗಿ ಏಗಿಕೊಂಡು ವರುಷಕ್ಕೊಮ್ಮೆ ಆರ್ಮಿಯಿಂದ ಬರುವ ಅವನಿಗಾಗಿ ಕಣ್ಣರೆಪ್ಪೆ ಬಾಡಿಸಿಕೊಂಡು ಬಿಡುವಿಲ್ಲದ ಕೆಲಸಗಳ ನಡುವೆ ಹೈರಾಣಾಗುತ್ತಾ ಕಾಯಬೇಕು. ಅದೂ ಅಲ್ಲದೆ ಸಾಬು ಬಾರೀ ಶಿಸ್ತು ಅಂತ ಕೇಳಿದವರೆಲ್ಲ ಹೇಳುವವರೆ. ನೆರೆಕರೆಯವರೊಂದಿಗೂ ಒಂದು ಬಿಗುವಿನ ಮನುಷ್ಯ. ಒಂದಷ್ಟು ಪುರುಷ ಅಹಂವೋ ಅಥವಾ ಯಾವುದೋ ಒಂದು ರೀತಿಯ ದೌಲತ್ ಇರುವ ಮನುಷ್ಯನಂತೆ ತೋರುತ್ತಾನೆ. ಒಬ್ಬನೇ ಬೆಳೆದುದಕ್ಕೆ ಇರಬೇಕು. ಅವನ ಅಪ್ಪನ ಮೊದಲ ಹೆಂಡತಿಗೆ ಇಬ್ಬರು ಹೆಣ್ಣುಮಕ್ಕಳು. ಮೊದಲ ಹೆಂಡತಿ ಅಸೌಖ್ಯದಿಂದ ತೀರಿಕೊಂಡ ನಂತರ ಅವಳ ಸ್ವಂತ ತಂಗಿ ಶಾಂತಿಯನ್ನೇ ಮದುವೆಯಾಗಿದ್ದರು. ಹಾಗಾಗಿ ಆ ಇಬ್ಬರು ಅಕ್ಕಂದಿರು ಅವನಿಗಿಂತ ವಯಸ್ಸಿನಲ್ಲಿ ತೀರಾ ದೊಡ್ಡವರು. ಇವನ ಎಳವೆಯಲ್ಲಿಯೇ ಅವರ ಮದುವೆ ಆಗಿತ್ತು. ಇನ್ನು ಸಾಬು ಬಾವನ ಚಿಕ್ಕಪ್ಪನಿಗೂ ಇವರಿಗೂ ಲೋಕ ನಿಯಮದಂತೆ ಮೊದಲಿಂದ ಆಗಿಬರುವುದಿಲ್ಲ. ಒಂದೇ ಮನೆಯಲ್ಲಿ ಇದ್ದರೂ ಅಡುಗೆ ಬೇರೆ ಬೇರೆ ಮಾಡಿಕೊಂಡು, ಒಬ್ಬರ ಮುಖ ಮತ್ತೊಬ್ಬರಿಗೆ ಕಾಣದಂತೆ ನಡುವೆ ಗೋಡೆಯೊಂದನ್ನು ಕಟ್ಟಿ ಮರೆ ಮಾಡಿಕೊಂಡಿದ್ದಾರೆ. ಹಾಗಾಗಿ ಅಮ್ಮನೊಟ್ಟಿಗೆ ಬಿಟ್ಟರೆ ಮಾತಿಲ್ಲದೆ ಮೂಡಿಯಾಗಿಯೇ ಬೆಳೆದ ಹುಡುಗ.

ಆದರೆ ನಮ್ಮಲ್ಲಿ ಎಲ್ಲ ಅಕ್ಕತಂಗಿಯರು ನಾವು ಸುಂದರಿಯರೇ ಅನ್ನುವುದನ್ನ ಊರಿನವರೆಲ್ಲ ಪದೇ ಪದೇ ಹೇಳುತ್ತಿದ್ದರು. ಹೊಸದಾಗಿ ಮದುವೆಯಾಗಿ ಬಂದರೆ, ಹುಡುಗಿ ಹೇಗಿದ್ದಾರೆ ಅಂತ ಕೇಳುವಾಗ, ನಮ್ಮ ಮೀರನಷ್ಟು, ಮಣಿಯಷ್ಟು ಸುಂದರಿಯ? ಅಂತ ಕೇಳುವಷ್ಟು. ಆದ್ದರಿಂದ ಮದುವೆ ಸಂಬಂಧ ಇನ್ನೆಲ್ಲೋ ಕೂಡಿಬರುತ್ತದೆ ಅನ್ನುವ ಖಾತ್ರಿಯಿತ್ತು. ಹಾಗಾಗಿ ಸಾಬು ಭಾವ ತಪ್ಪಿದರೆ ಒಳ್ಳೆಯದು ಅಂತ ಅವಳ ಮನಸು ಬಯಸುತ್ತಿತ್ತು. ಹಾಗಂತ ಊರಿನ ಹತ್ರ ಪತ್ರ ಮದುವೆ ಆದರೆ ಅದೂ ಕಷ್ಟವೇ. ಹೇಳಿ ಕೇಳಿ ಸೋದರ ಸಂಬಂಧಿಗಳು. ಅಲ್ಲಿ ಇಲ್ಲಿ ಮದುವೆಗೆ ಬಂದಾಗ ಮುಖ ನೋಡಬೇಕು. ಅದಕ್ಕೇ ಇರಬೇಕು, ಕನ್ನಡ ಜಿಲ್ಲೆಯಿಂದ ಸದಾ ಭಾವನ ಸಂಬಂಧ ಬಂದಾಗ ಕಣ್ಣು ಮುಚ್ಚಿ ಒಪ್ಪಿಕೊಂಡಿದ್ದಳು.

ಅದೂ ದೂರದ ಕಾಡು ದಾರಿಯಲ್ಲಿ ಇರುವ ಒಂಟಿ ಮನೆ ಅಂತೆ. ನಾವು ಯಾರೂ ಹೋಗಿ ನೋಡಿ ಬರಲಿಲ್ಲ. ಒಂದು ರೀತಿಯಲ್ಲಿ ಯಾರ್‍ಯಾರೋ ಮಾತು ಕೇಳಿ ಕಣ್ಣು ಮುಚ್ಚಿ ಮದುವೆ ಮಾಡಿಕೊಟ್ಟಂತೆ. ಹತ್ರ ಪತ್ರ ಊರಿನ ಸಂಬಂಧ ಬಂದರೆ, ಆಚೆ ಮನೆಯ ಬೋಜಪ್ಪ ಮನೆಯವರೆಗೆ ನೆಂಟರು ಬರಲು ಬಿಡುವುದೇ ಇಲ್ಲ. ಏನಾದರೂ ಚಾಡಿ ಹೇಳಿ, ಅಪವಾದ ಹೊರೆಸಿ ಅವರನ್ನು ಇಲ್ಲಿಗೆ ಬರಲು ಬಿಡದೆ ತಮ್ಮ ಮನೆಯ ಹೆಣ್ಣುಮಕ್ಕಳನ್ನು ತೋರಿಸಲು ಕರೆದುಕೊಂಡು ಹೋಗುವ ಅಪಾಯ ಕೂಡ ಅಜ್ಜಿಗೆ ಗೊತ್ತಿತ್ತು. ಆ ಕಾರಣಕ್ಕೆ ಹತ್ತಿರದ ಬಂಧುಗಳೊಬ್ಬರು ಹೇಳಿದ್ದ ನೆಂಟಸ್ತನವನ್ನು ನಂಬಿಕೆಯ ಮೇರೆಗೆ ಗೊತ್ತು ಗುರಿಯಿಲ್ಲದ ಆ ಊರಿನ ಸಂಬಂಧ ಒಪ್ಪಿಕೊಂಡಿರಬೇಕು. ಎಳೆ ವಯಸ್ಸಿನಲ್ಲಿ ಅದೂ ಕೂಡ ವಿಧವೆಯಾಗಿ ಸಾಕಷ್ಟು ಅನುಭವಿಸಿದ ಜೀವ. ಹೊಸ ನೆಂಟರ ಊರಿಗೆ ಸುಲಭಕ್ಕೆ ಹೋಗಿಬರಲು ಯಾವ ಸೌಕರ್ಯಗಳೂ ಇಲ್ಲ. ಮನೆ ನೋಡಲು ಶಾಸ್ತ್ರಕ್ಕೆಂದು ಹೋಗಿ ಬಂದವರು, ಎರಡು ಬಸ್ಸು ಹತ್ತಿ ಇಳಿದು, ಉರಿವ ಸೆಕೆಯಲ್ಲಿ ಹೈರಾಣಾಗಿ ಮತ್ತೆ ಮನೆ ತಲುಪಲು ಹತ್ತು ಮೈಲಿ ಕಾಡ ದಾರಿಯಲ್ಲಿ ನಡೆದು ಮತ್ತೆ ವಾಪಾಸು ಬರುವುದೆಂದು? ಆ ರಾತ್ರೆ ಅಲ್ಲೇ ಉಳಿದು ಮಾರನೇ ದಿನ ಬಂದದ್ದಂತೆ. ಒಂದೇ ಒಂದು ಖುಷಿಯ ಸಂಗತಿ ಎಂದರೆ ಅಡಿಕೆ ಅಂಗಳದ ತುಂಬಾ ಅಡಿಕೆ ರಾಶಿ, ಎರಡು ಅಂತಸ್ತಿನ, ಸಿಮೆಂಟು ಕಲ್ಲಿನ ಮನೆ. ಸುತ್ತಲೂ ನೋಡಿದಷ್ಟು ಅಡಿಕೆ ತೆಂಗು, ಗೇರು ಬೀಜ. ಮತ್ತೆ ಪಾಲಾದರೆ ಸಾಲು 4–5 ಗಂಡುಮಕ್ಕಳು ಬಿಟ್ಟರೆ, ಉಳಿದಂತೆ ಆಳುಕಾಳು, ತಿನ್ನಲು ಉಣ್ಣಲು ಕೊರತೆಯಿದ್ದಂತೆ ತೋರುತ್ತಿರಲಿಲ್ಲ. ಒಂದೇ ಒಂದು ವ್ಯತ್ಯಾಸ ಎಂದರೆ ಇಲ್ಲಿ ನಡುಗುವ ಚಳಿ, ಅಲ್ಲಿ ಉರಿವ ಸೆಕೆ. ಅಂತೂ ಇಂತೂ ವೀಳ್ಯಶಾಸ್ತ್ರ ಮುಗಿದು ಮದುವೆ ತಯಾರಿ ನಡೆಸುವ ಹೊತ್ತಿಗೆ ಸಾಬು ಭಾವ ತೀರಾ ಚಡಪಡಿಕೆಯಿಂದ ಕಂಗಾಲಾಗಿದ್ದರು. ನೇರ ಅಜ್ಜಿ ಮನೆಯಲ್ಲಿ ಬಂದು ಪ್ರಸ್ತಾಪಿಸಿಯೂ ಆಯಿತು. ನಾನು ಮಣಿಯನ್ನು ಮದುವೆಯಾಗಬೇಕೆಂದು ಬಯಸಿದ್ದೆ, ಅದಕ್ಕೆ ಮೀರನ ಮದುವೆಯಾಗುವಲ್ಲಿಯವರೆಗೆ ಕಾದಿದ್ದೆ. ಅಮ್ಮನ ಬಳಿ ಇದನ್ನು ಹೇಳಿದ್ದೆ ಕೂಡ. ಇಷ್ಟಿದ್ದೂ ನಮಗೆ ಒಂದು ವಿಚಾರ ಹೇಳದೆ ನೀವು ಮದುವೆ ಮಾಡುವುದು ಎಷ್ಟರ ಮಟ್ಟಿಗೆ ಸರಿ? ಈ ಮದುವೆ ನಿಲ್ಲಿಸಬೇಕು ಮತ್ತು ನಾನೇ ಮಣಿಯನ್ನು ಮದುವೆಯಾಗುವುದು ಅಂತ ಹೇಳಿದ್ದ. ಇಷ್ಟೆಲ್ಲ ಮುಂದುವರೆದು ಮದುವೆ ತಯಾರಿ ನಡೆಯುವಾಗ ಹೇಗೆ ಈ ಮದುವೆ ಬೇಡ ಅನ್ನುವುದು? ಹೇಗೆ ಜನರಿಗೆ ಮುಖ ತೋರಿಸುವುದು? ಅಜ್ಜಿಗೆ ಧರ್ಮಸಂಕಟ. ಕೊನೆಗೆ ಆದದ್ದು ಆಗಲಿ ಮಣಿಯಲ್ಲಿಯೇ ಕೇಳಿ ಬಿಡುವ ಅಂದಾಗ ಅವಳು ಖಡಾಖಂಡಿತವಾಗಿ ಒಲ್ಲೆ ಅಂದುಬಿಟ್ಟಳು. ಮತ್ತೇನು ಮಾಡಲು ಸಾಧ್ಯ?

ಸಾಬು ಭಾವ ತುಳಿಸಿಕೊಂಡು ಹೆಡೆ ಬಿಚ್ಚಿದ ಹಾವಿನಂತೆ ಬುಸುಗುಟ್ಟತೊಡಗಿದ. ಎಲ್ಲರ ಜೊತೆ ಹೇಳಿ ಮಾಡಿಸಿದ. ಯಾವುದೋ ಫಲಕಾರಿಯಾಗದೆ ಕೊನೆಯ ಅಸ್ತ್ರವೆಂಬಂತೆ ಈ ಮದುವೆ ನಿಲ್ಲಿಸಲು ಹೆಸರುವಾಸಿಯಾದ ದೇವಸ್ಥಾನವೊಂದರ ಧರ್ಮಾಧಿಕಾರಿಗೆ ಪತ್ರ ಬರೆದಿದ್ದರಂತೆ. ನಾನು ಮೆಚ್ಚಿದ ಹುಡುಗಿಯನ್ನು ಬೇರೆಡೆಗೆ ಮದುವೆ ಮಾಡಿ ಕೊಡುತ್ತಿದ್ದಾರೆ, ಇದು ಸರಿಯಲ್ಲ, ನೀವೇ ನ್ಯಾಯ ಒದಗಿಸಿಕೊಡಬೇಕು ಎಂಬುದಾಗಿ.'